ಉತ್ತರಿಸಬೇಕಾದ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಯವರು)

ಉತ್ತರ

1. ಪಿರಿಯಾ ಪಟ್ಟಣದ ನೀರು ಸರಬರಾಜು ಯೋಜನೆಯ ನೀರು ಶುದ್ಧೀಕರಣಾಗಾರ ಹೊರತುಪಡಿಸಿ ಬಹುತೇಕ ಮುಗಿಯುವ ಹಂತದಲ್ಲಿದ್ದು ಮಾರ್ಚಿ 2002ಕ್ಕೆ ಚಾಲನೆಗೊಳಿಸಲಾಗುವುದು. ಆದರೆ ಶುದ್ದೀಕರಣಾಗಾರದ ಕೆಲಸದ ಜಮೀನು ಸ್ವಾಧೀನದ ಪ್ರಕ್ರಿಯೆಯು ವಿಳಂಬವಾಗಿದ್ದು ಈ ಕಾಮಗಾರಿಯನ್ನು ಆಗಸ್ಟ್ 2002ರೊಳಗೆ ಪೂರ್ಣಗೊಳಿಸಲಾಗುವುದು.

2. ಈ ಯೋಜನೆಯ ಅಂದಾಜು ವೆಚ್ಚ ರೂ.480.00 ಲಕ್ಷಗಳು. ಡಿಸೆಂಬರ್ 2001ರ ಅಂತ್ಯಕ್ಕೆ ರೂ.352.08 ಲಕ್ಷಗಳು ವೆಚ್ಚವಾಗಿದೆ. ಈ ಯೋಜನೆಗೆ ಬಾಕಿ ರೂ.127.92 ಲಕ್ಷ ಬೇಕಾಗುತ್ತದೆ.

3. ಈ ಯೋಜನೆಯನ್ನು ಮೇ 2002ಕ್ಕೆ ಚಾಲನೆಗೊಳಿಸಲಾಗುವುದು.

ಪಿರಿಯಾಪಟ್ಟಣ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಹುಡ್ಕೋ ಕಾಮಗಾರಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 913(1185)

ಸದಸ್ಯರ ಹೆಸರು: ಶ್ರೀ ಬಸವರಾಜು ಹೆಚ್.ಸಿ.(ಪಿರಿಯಾಪಟ್ಟಣ)

ಪ್ರಶ್ನೆ

ಅ) ಪಿರಿಯಾಪಟ್ಟಣ ಪಟ್ಟಣ ಪಂಚಾಯತಿಯಲ್ಲಿ ವಿವಿಧ ಬಡಾವಣೆಗಳಿಗೆ ಚರಂಡಿ ಹಾಗೂ ರಸ್ತೆ ಡಾಂಬರೀಕರಣಕ್ಕಾಗಿ ಹುಡ್ಕೋ ಪತಿಯಿಂದ 25 ಲಕ್ಷ ರೂ.ಗಳು ಮಂಜೂರಾಗಿದ್ದು ಈ ಕಾಮಗಾರಿಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ?

ಆ) ಕಾಮಗಾರಿಗಳು ಯಾವ ಹಂತದಲ್ಲಿದೆ?

ಇ) ಕಾಮಗಾರಿಗಳು ಪೂರ್ಣವಾಗಿ ಕಳಪೆ ಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಊ) ಕಾಮಗಾರಿಗಳು ತಾಂತ್ರಿಕವಾಗಿ ಸರಿಯಾಗಿದೆಯೇ?

ಋ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು?

ಉತ್ತರಿಸುವ ಸಚಿವರು: ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಉತ್ತರ

ಅ) ಈ ಕಾಮಗಾರಿಯನ್ನು ಮೆ:ಚಂದ್ರಗಿರಿ ಕನ್ಸ್ಟ್ರಕ್ಷನ್ ಕಂಪನಿ ಇವರಿಗೆ ಟೆಂಡರ್ ಮುಖಾಂತರ ವಹಿಸಲಾಗಿದೆ.

ಆ) ಕಾಮಗಾರಿಗಳು ಪ್ರಗತಿಯಲ್ಲಿವೆ. 750 ಮೀಟರ್ ಸೈಜ್‌ಕಲ್ಲಿನ ಚರಂಡಿ ಪೈಕಿ 580 ಮೀಟರ್ ಚರಂಡಿ ಪೂರ್ಣಗೊಂಡಿದೆ ಹಾಗೂ 1800 ಮೀಟರ್ ಉದ್ದದ ಸುಟ್ಟ ಕಲ್ಲು ಚರಂಡಿ ಹಾಗೂ 1500 ಮೀಟರ್ ಜಲ್ಲಿ ಹಾಕುವ ಕಾಮಗಾರಿಗಳನ್ನು ಸದ್ಯದಲ್ಲೇ ಕೈಗೊಳ್ಳಲಾಗುವುದು.

ಇ) ಕೆಲವು ಲೋಪದೋಷಗಳು ಕಂಡು ಬಂದಿದ್ದು ಇವುಗಳನ್ನು ಸರಿಪಡಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಈ) ಕಳಪೆ ಗುಣಮಟ್ಟದ ಕಾಮಗಾರಿಗಳಿಗೆ ಬಿಲ್ಲುಗಳನ್ನು ಪಾವತಿಸಿರುವುದಿಲ್ಲ.

ಉ ಮತ್ತು ಊ) ಅಂದಾಜನ್ನು ಪಿರಿಯಾಪಟ್ಟಣ ಪಟ್ಟಣ ಪಂಚಾಯಿತಿಯ ಪತಿಯಿಂದ ತಯಾರಿಸಲ್ಪಟ್ಟಿದ್ದು, ಉಸ್ತುವಾರಿಗಾಗಿ ಮೆ:ಸಿ.ಇ.ಎಸ್.(ಇಂ) ಲಿಮಿಟೆಡ್ ಇವರನ್ನು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್‌ಗಳಾಗಿ ನೇಮಿಸಲಾಗಿದ್ದು, ಉತ್ತಮ ತಾಂತ್ರಿಕತೆಯಿಂದ ಕಾರ್ಯ ನಿರ್ವಹಿಸಲಾಗುತ್ತಿದೆ.

ಪಿರಿಯಾಪಟ್ಟಣ ಟೌನ್ ಪಂಚಾಯ್ತಿ ವ್ಯಾಪ್ತಿಯಲ್ಲಿ ಹುಡ್ಕೋ ಯೋಜನೆಯಡಿಯಲ್ಲಿ ಕಾಮಗಾರಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 914(17)

ಸದಸ್ಯರ ಹೆಸರು: ಶ್ರೀ ಬಸವರಾಜು ಹೆಚ್.ಸಿ.(ಪಿರಿಯಾಪಟ್ಟಣ)

ಪ್ರಶ್ನೆ

ಅ) ಪಿರಿಯಾಪಟ್ಟಣ ಟೌನ್ ಪಂಚಾಯ್ತಿ ವ್ಯಾಪ್ತಿಯಲ್ಲಿ ಹುಡ್ಕೋ ಯೋಜನೆಯಡಿ